# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 993 (1126)
ಸದಸ್ಯರ ಹೆಸರು : ಶ್ರೀ ಮುನಿರಾಜು ಗೌಡ ಪಿ.ಎಂ.
(ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ : 22.09.2022
ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಗಳು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿರುವ ಒಟ್ಟು ಐಪಿಎಸ್ ಅಧಿಕಾರಿಗಳ ಸಂಖ್ಯೆ ಎಷ್ಟು; ಎರಡು ವರ್ಷಕ್ಕೂ ಹೆಚ್ಚು ಅವಧಿಯಿಂದ ಒಂದೇ ಸ್ಥಳದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವವರ ಸಂಖ್ಯೆ ಎಷ್ಟು; (ಕಾರ್ಯಾಲಯದ ಹೆಸರು ಮತ್ತು ವಿವರ ನೀಡುವುದು) | ರಾಜ್ಯದಲ್ಲಿರುವ ಐಪಿಎಸ್ ಅಧಿಕಾರಿಗಳ ಸಂಖ್ಯೆ: 190<br><br>ಎರಡು ವರ್ಷಕ್ಕೂ ಹೆಚ್ಚು ಅವಧಿಯಿಂದ ಒಂದೇ ಸ್ಥಳದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳ ಸಂಖ್ಯೆ: 22.<br><br>(ಕಾರ್ಯಾಲಯದ ಹೆಸರು ಮತ್ತು ವಿವರ ಅನುಬಂಧ-ಅ ರಲ್ಲಿ ಲಗತ್ತಿಸಿದೆ.) |
| ಆ) | ಒಂದೇ ವರ್ಷದಲ್ಲಿ ಎರಡಕ್ಕೂ ಹೆಚ್ಚು ಕಡೆ ವರ್ಗಾವಣೆಯಾದವರ ಸಂಖ್ಯೆ ಎಷ್ಟು; | ಶೂನ್ಯ. |
| ಇ) | ಆರ್ಡರ್ಲಿ ವ್ಯವಸ್ಥೆ ರದ್ದಾದ ನಂತರವೂ ಕೆಲವು ಪೊಲೀಸ್ ಅಧಿಕಾರಿಗಳು ತಮ್ಮ ಮನೆಯ ಕೆಲಸಕ್ಕೆ ಪೊಲೀಸರನ್ನು ನೇಮಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಅಂತಹವರ ಮೇಲೆ ಸರ್ಕಾರ ಕೈಗೊಂಡ ಕ್ರಮವೇನು; | ಸರ್ಕಾರದ ಆದೇಶ ಸಂಖ್ಯೆ: ಒಇ 289 ಪೊಸಿಇ 2014 ದಿನಾಂಕ: 08.03.2017 ರಲ್ಲಿ ಆರ್ಡರ್ಲಿ ವ್ಯವಸ್ಥೆಯನ್ನು ಪರಿಷ್ಕರಿಸಿ, ತಕ್ಷಣದಿಂದ ಜಾರಿಗೆ ಬರುವಂತೆ ಪೊಲೀಸ್ ಸಿಬ್ಬಂದಿಗಳನ್ನು ಆರ್ಡರ್ಲಿಗಳನ್ನಾಗಿ ನೇಮಿಸುತ್ತಿರುವುದನ್ನು ಬದಲಿಸಿ, ಅನುಯಾಯಿಗಳಗಳನ್ನು ನೇಮಿಸಲು ಹಾಗೂ ಬದಲಿ ಭತ್ಯೆಯನ್ನು ನೀಡಲು ಸರ್ಕಾರದ ಮಂಜೂರಾತಿ ನೀಡಲಾಗಿದೆ. (ಪ್ರತಿ ಅನುಬಂಧ-ಆ ರಲ್ಲಿ ಲಗತ್ತಿಸಿದೆ.) |
| ಈ) | ಸೇಫ್ ಸಿಟಿ ಪ್ರಾಜೆಕ್ಟ್ ಎಂದರೇನು; ಇದರ ವ್ಯಾಪ್ತಿಯಲ್ಲಿ ಬರುವ ನಗರಗಳು ಯಾವುವು; ಯೋಜನೆಯು ಯಾವ ಹಂತದಲ್ಲಿದೆ; ಈ ಯೋಜನೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಐಪಿಎಸ್ ಅಧಿಕಾರಿಗಳು ಯಾರು? | "ಸೇಫ್ ಸಿಟಿ ಪ್ರಾಜೆಕ್ಟ್" ಎಂದರೆ ಮಹಿಳೆಯರು ಮತ್ತು ಹೆಣ್ಣುಮಕ್ಕಳ ಸುರಕ್ಷತೆಗಾಗಿ ಗುರುತಿಸಲಾದ ನಗರಗಳಲ್ಲಿ ಕ್ಯಾಮೆರಾ ಮತ್ತು ಇನ್ನಿತರೆ ಸುರಕ್ಷಾ ವ್ಯವಸ್ಥೆಗಳನ್ನು ಅಳವಡಿಸಲು ನಿರ್ಭಯ ನಿಧಿ ಅಡಿಯಲ್ಲಿ ಕೇಂದ್ರ ಗೃಹ ಮಂತ್ರಾಲಯವು ರೂಪಿಸಿರುವ ಯೋಜನೆಯಾಗಿರುತ್ತದೆ. |

| | | |
|---|---|---|
| | | ರಾಜ್ಯದಲ್ಲಿ ಬೆಂಗಳೂರು ನಗರ ಯೋಜನೆಯ ವ್ಯಾಪ್ತಿಯಲ್ಲಿ ಬರುತ್ತದೆ.<br><br>ಈ ಯೋಜನೆಯ ಅಡಿಯಲ್ಲಿ ಹಲವಾರು ಕಾರ್ಯಕ್ರಮಗಳಿದ್ದು, ಇವುಗಳು ಅನುಷ್ಠಾನದ ವಿವಿಧ ಹಂತದಲ್ಲಿರುತ್ತದೆ.<br><br>ಈ ಕೆಳಕಂಡ ಐಪಿಎಸ್ ಅಧಿಕಾರಿಗಳು ಸದರಿ ಯೋಜನೆಯಲ್ಲಿ<br>ಕಾರ್ಯನಿರ್ವಹಿಸುತ್ತಿದ್ದಾರೆ.<br><br>• ಶ್ರೀ ಸಿ.ಹೆಚ್. ಪ್ರತಾಪ್ ರೆಡ್ಡಿ, ಐಪಿಎಸ್, ಪೊಲೀಸ್ ಆಯುಕ್ತರು, ಬೆಂಗಳೂರು ನಗರ<br>• ಡಾ. ಎ. ಸುಬ್ರಮಣ್ಯೇಶ್ವರ ರಾವ್, ಐಪಿಎಸ್ ಅಪರ ಪೊಲೀಸ್ ಆಯುಕ್ತರು, ಆಡಳಿತ (ಪ್ರ), ಬೆಂಗಳೂರು ನಗರ<br><br>• ಶ್ರೀ ಸಂತೋಷ್ ಬಾಬು, ಐಪಿಎಸ್, ಪೊಲೀಸ್ ಅಧೀಕ್ಷಕರು, ರಾಮನಗರ ಜಿಲ್ಲೆ<br><br>• ಶ್ರೀಮತಿ ನಿಶಾ ಜೇಮ್ಸ್, ಐಪಿಎಸ್, ಉಪ ಪೋಲಿಸ್ ಆಯುಕ್ತರು, ಆಡಳಿತ, ಬೆಂಗಳೂರು ನಗರ<br><br>• ಶ್ರೀ ರಾಮರಾಜನ್, ಐಪಿಎಸ್, ಉಪ ಪೊಲೀಸ್ ಆಯುಕ್ತರು, ಕಮಾಂಡ್ ಸೆಂಟರ್, ಬೆಂಗಳೂರು ನಗರ. |

ಸಂಖ್ಯೆ: ಇ-ಸಿಆಸುಇ 300 ಎಸ್‌ಪಿಎಸ್ 2022

**(ಬಸವರಾಜ್ ಬೊಮ್ಮಾಯಿ)**
**ಮುಖ್ಯಮಂತ್ರಿ**

ಅನುಬಂಧ – ಅ

| Sl. No | Name of the Officer Sriyuths/ Smt | Post Held | Office Address | Date of present charge |
|---|---|---|---|---|
| 1. | Praveen Sood, IPS Director General and Inspector General of Police | Director General & Inspector General of Police (Head of Police Force), Karnataka, Bengaluru. | Office of the Director General & Inspector General of Police Karnataka, Bengaluru. | 31.01.2020 |
| 2. | Alok Mohan, IPS, Director General of Police | Director General of Police, Prisons & Correctional Services, Bengaluru | Office of the Director General of Police, Prisons & Correctional Services, Bengaluru | 31.01.2020 |
| 3. | Sandhu P.S, IPS, Director General of Police | Director General of Police, CID, Special Units & Economic Offences, Bengaluru | Office of the Director General of Police, CID, Special Units & Economic Offences, Bengaluru | 01.08.2020 |
| 4. | Dr. M.A.Saleem, IPS, Addtional Director General of Police | Addtional Director General of Police, Administration, Bengaluru | Office of the Director General & Inspector General of Police Karnataka, Bengaluru. | 06.08.2019 |
| 5. | Dayananda B, IPS, Additional Director General of Police | Director, State Intelligence, Bengaluru | Office of the Director, State Intelligence, Bengaluru | 01.08.2020 |
| 6. | Umesh Kumar, IPS, Additional Director General of Police | ADGP, CID, Economic Offences, Bengaluru | Office of the Director General of Police, CID, Special Units & Economic Offences, Bengaluru | 05.08.2020 |
| 7. | Manish Kharbikar, IPS, Inspector General of Police, | Inspector General of Police, North Eastern Range, Kalaburagi | Office of the Inspector General of Police, North Eastern Range, Kalaburagi | 11.08.2018 |
| 8. | Devajyoti Ray, IPS, Inspector General of Police, | Inspector General of Police, Western Range, Mangaluru | Office of the Inspector General of Police, Western Range, Mangaluru | 16.03.2020 |
| 9. | Ravikanthe Gowda B.R, IPS, Deputy Inspector General of Police, | DIG & Joint Commissioner of Police Traffic, Bengaluru City | Office of the DIG & Joint Commissioner of Police Traffic, Bengaluru City | 06.08.2019 |
| 10. | Siddaramappa S.N,IPS, Deputy Inspector General of Police, | Managing Director, KEONICS, Bengaluru | Office of the Managing Director, KEONICS, Bengaluru | 01.08.2020 |

| Sl. No | Name of the Officer<br><br>Sriyuths/ Smt | Post Held | Office Address | Date of present charge |
|---|---|---|---|---|
| 11. | Lokesh Kumar B.S, IPS, Deputy Inspector General of Police, | DIGP , ISD, Bengaluru | Office of the Additional Director General of Police, ISD, Bengaluru | 09.07.2020 |
| 12. | Balakrishna K.T, IPS, Deputy Inspector General of Police, | DIGP , Police Fire Services, Bengaluru | Office of the Director General of Police & Commandant General Home Guards & Ex-officio Director, Civil Defence & Director, Fire Force, Bengaluru | 28.02.2020 |
| 13. | Dr. Chandragupta, IPS, Deputy Inspector General of Police, | DIGP & Commissioner of Police, Mysuru City | Office of the DIGP & Commissioner of Police, Mysuru City | 01.02.2020 |
| 14. | Ramesh B, IPS, Superintendent of Police. | Superintendent of Police, CID, Bengaluru | Office of the Director General of Police, CID, Special Units & Economic Offences, Bengaluru | 04.08.2020 |
| 15. | Iada Martin Marbaniang, IPS, Superintendent of Police. | SP & Principal, Police Training College, Kalaburagi | Office of the SP & Principal, Police Training College, Kalaburagi | 27.08.2020 |
| 16. | Smt Renuka K. Sukumar, IPS, Superintendent of Police. | Deputy Commandant General, Home Guards & Ex-officio Deputy Director of Civil Defence, Bengaluru | Office of the Director General of Police & Commandant General Home Guards & Ex-officio Director, Civil Defence & Director, Fire Force, Bengaluru | 04.10.2019 |
| 17. | M.A.Arun Ranga Rajan, IPS, Superintendent of Police. | Superintendent of Police., Internal Security Division, Kalaburagi | Office of the Superintendent of Police., Internal Security Division, Kalaburagi | 14.01.2020 |
| 18. | Puttamadaiah, M, IPS, Superintendent of Police. | Superintendent of Police, Special Investigation Team, Karnataka Lokayuktha, Bengaluru | Office of the Superintendent of Police, Special Investigation Team, Karnataka Lokayuktha, Bengaluru | 12.10.2018 |

| Sl. No | Name of the Officer<br>Sriyuths/ Smt | Post Held | Office Address | Date of present charge |
|---|---|---|---|---|
| 19. | Jinendra Kanagavi, IPS, Superintendent of Police. | Superintendent of Police, Internal Security Division, Bengaluru | Office of the Additional Director General of Police, Internal Security Division, Bengaluru | 29.02.2020 |
| 20. | Nisha James, IPS, Superintendent of Police. | Deputy Commissioner of Police, Administration, Bengaluru City | Office of the Commissioner Of Police, Benagluru City | 02.01.2020 |
| 21. | Mohammad Sujeetha M.S, IPS, Superintendent of Police. | Deputy Commissioner of Police,CAR, Headquarters, Bengaluru City | Office of the Commissioner Of Police, Benagluru City | 05.08.2020 |
| 22. | Saidulu Adavath, IPS, Superintendent of Police. | Superintendent of Police, Ballari District, Ballari | Office of the Superintendent of Police, Ballari District, Ballari | 02.09.2020 |

******

ಅನುಬಂಧ-೬

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಪೊಲೀಸ್ ಇಲಾಖೆಯಲ್ಲಿನ ಆರ್ಡರ್ಲಿ ವ್ಯವಸ್ಥೆಯನ್ನು ಪರಿಷ್ಕರಿಸುವ ಬಗ್ಗೆ

**ಓದಲಾಗಿದೆ:** ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು ಇವರ ಪತ್ರ ಸಂಖ್ಯೆ: ಆರ್.ಎಲ್.ಎನ್.(1)32/2015-16 ದಿನಾಂಕ 24.06.2016, 08.08.2016 ಮತ್ತು 18.11.2016

* * *

**ಪ್ರಸ್ತಾವನೆ:**

ಕರ್ನಾಟಕ ಪೊಲೀಸ್ ಮ್ಯಾನುಯಲ್‌ನ ಆದೇಶ ಸಂಖ್ಯೆ: 862ರನ್ವಯ ಪೊಲೀಸ್ ಅಧಿಕಾರಿಗಳ ದರ್ಜೆಗನುಸಾರವಾಗಿ ಕೆಳಕಂಡ ಪ್ರಮಾಣದಲ್ಲಿ ಆರ್ಡರ್ಲಿಗಳನ್ನು ನಿಯೋಜಿಸಲು ಅವಕಾಶ ಕಲ್ಪಿಸಲಾಗಿರುತ್ತದೆ.

| ಪೊಲೀಸ್ ಅಧಿಕಾರಿಗಳ ಹುದ್ದೆ | ಆರ್ಡರ್ಲಿಗಳ ಸಂಖ್ಯೆ |
|---|---|
| ಡಿ.ಜಿ. ಮತ್ತು ಐ.ಜಿ.ಪಿ. ಮತ್ತು ಎ.ಡಿ.ಜಿ.ಪಿ. | 2 – ಹೆಚ್.ಸಿ. 4 – ಪಿ.ಸಿ. |
| ಐ.ಜಿ.ಪಿ. | 1 – ಹೆಚ್.ಸಿ. 3 – ಪಿ.ಸಿ. |
| ಡಿ.ಐ.ಜಿ.ಪಿ. | 1 – ಹೆಚ್.ಸಿ. 2 – ಪಿ.ಸಿ. |
| ಎಸ್.ಪಿ ಮತ್ತು ಸಮಾನ ದರ್ಜೆಯ ಹುದ್ದೆ | 3 – ಪಿ.ಸಿ. |
| ಎ.ಎಸ್.ಪಿ., ಡಿವೈ.ಎಸ್.ಪಿ., ಮತ್ತು ಸಮಾನಾಂತರ ಹುದ್ದೆ | 2 – ಪಿ.ಸಿ. |
| ಪಿ.ಐ., ಆರ್.ಪಿ.ಐ., ಮತ್ತು ಸಮಾನಾಂತರ ದರ್ಜೆ | 1 – ಪಿ.ಸಿ. |

ಪ್ರಸ್ತುತ ನಗರ ಸಶಸ್ತ್ರ ಮೀಸಲು ಪಡೆಗಳಲ್ಲಿ (ಸಿ.ಎ.ಆರ್.) ಕರ್ತವ್ಯ ನಿರ್ವಹಿಸುತ್ತಿರುವ ಸಶಸ್ತ್ರ ಪೊಲೀಸ್ ಪೇದೆಗಳನ್ನು (ಎ.ಪಿ.ಸಿ.) ಹಿರಿಯ ಪೊಲೀಸ್ ಅಧಿಕಾರಿಗಳಿಗೆ ಆರ್ಡರ್ಲಿಗಳನ್ನಾಗಿ ನೇಮಿಸಲಾಗುತ್ತಿರುತ್ತದೆ. ಸದರಿ ಪೊಲೀಸ್ ಸಿಬ್ಬಂದಿಗಳಿಗೆ ಗಾರ್ಡ್, ಸೆಂಟ್ರಿ, ಗಣ್ಯ / ಅತಿಗಣ್ಯ ವ್ಯಕ್ತಿಗಳ ಭದ್ರತೆ, ಚುನಾವಣಾ ಕರ್ತವ್ಯ, ವಿಶೇಷ ಗಸ್ತು, ಡಕಾಯಿತಿ ಪ್ರತಿಬಂಧಕ ಕಾರ್ಯಾಚರಣೆ ಹಾಗೂ ನೈಸರ್ಗಿಕ ವಿಕೋಪಗಳಾದ ಪ್ರವಾಹ, ಭೂಕಂಪ ಇತ್ಯಾದಿ ತುರ್ತು ಸಂದರ್ಭಗಳಲ್ಲಿ ಕರ್ತವ್ಯ ನಿರ್ವಹಿಸಲು ಅವಶ್ಯವಿರುವ ತರಬೇತಿಯನ್ನು ಇಲಾಖಾವತಿಯಿಂದ ನೀಡಲಾಗುತ್ತಿದ್ದು, ಎ.ಪಿ.ಸಿ.ಗಳನ್ನು ಹಿರಿಯ ಅಧಿಕಾರಿಗಳಿಗೆ ಆರ್ಡರ್ಲಿಗಳನ್ನಾಗಿ ನೇಮಿಸುತ್ತಿರುವುದರಿಂದ ಅವರುಗಳಿಗೆ ನೀಡಿದ ತರಬೇತಿಯು ವ್ಯರ್ಥವಾಗುತ್ತಿದ್ದು, ತುರ್ತು ಸಂದರ್ಭಗಳಲ್ಲಿ ಸಿಬ್ಬಂದಿ ಕೊರತೆಯಿಂದಾಗಿ ಉಂಟಾಗುವ ಪರಿಸ್ಥಿತಿಯನ್ನು ಪರಿಣಾಮಕಾರಿಯಾಗಿ ನಿಯಂತ್ರಿಸುವಲ್ಲಿ ಹಾಗೂ ಮುಂದೆ ನಡೆಯಬಹುದಾದ ದುಷ್ಪರಿಣಾಮಗಳನ್ನು ತಡೆಗಟ್ಟುವಲ್ಲಿ ವಿಳಂಬವಾಗುತ್ತಿರುತ್ತದೆ. ಮುಂದುವರೆದು ಸದರಿ

....2

ಸಿಬ್ಬಂದಿಗಳಿಗೆ ನೀಡುವ ವೇತನ ಮತ್ತು ವೇತನೇತರ ಸೌಲಭ್ಯಗಳನ್ನು ಅನುಯಾಯಿಗಳಿಗೆ ಹೋಲಿಸಿದಲ್ಲಿ ಅಧಿಕ ವೆಚ್ಚವಾಗುತ್ತಿದ್ದು, ಈ ಅಂಶಗಳ ಹಿನ್ನೆಲೆಯಲ್ಲಿ ಎ.ಪಿ.ಸಿ.ಗಳನ್ನು ಆರ್ಡರ್ಲಿಗಳನ್ನಾಗಿ ಬಳಸಿಕೊಳ್ಳುವ ಬದಲು ಅನುಯಾಯಿಗಳನ್ನು ಕಛೇರಿ ಸಹಾಯಕರನ್ನಾಗಿ ನೇಮಿಸಿಕೊಳ್ಳಲು ಮೇಲೆ ಓದಲಾದ ದಿನಾಂಕ 24.06.2016ರ ಪತ್ರದಲ್ಲಿ ಕೋರಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ.

ಪ್ರಸ್ತುತ ನಗರ ಸಶಸ್ತ್ರ ಮೀಸಲು ಪಡೆಯ 1239 ಸಿಬ್ಬಂದಿಗಳು ಬೆಂಗಳೂರು ನಗರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳಿಗೆ ಆರ್ಡರ್ಲಿಗಳಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಕರ್ನಾಟಕ ರಾಜ್ಯ ಮೀಸಲು ಪಡೆ (ಕೆ.ಎಸ್.ಆರ್.ಪಿ.) ಮತ್ತು ತರಬೇತಿ ಘಟಕಗಳಲ್ಲಿ ಅನುಯಾಯಿ ಸಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳಲಾಗುತ್ತಿದ್ದು, ಸದರಿ ಘಟಕಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪೊಲೀಸ್ ಅಧಿಕಾರಿಗಳಿಗೆ ಸದರಿ ಘಟಕಗಳಲ್ಲಿನ ಅನುಯಾಯಿ ಮಂಜೂರಾತಿ ಬಲದಿಂದಲೇ ಸಹಾಯಕರನ್ನು ನೇಮಕ ಮಾಡಬಹುದಾಗಿರುತ್ತದೆ. ಆದುದರಿಂದ ಕೆ.ಎಸ್.ಆರ್.ಪಿ ಮತ್ತು ತರಬೇತಿ ಘಟಕಗಳನ್ನು ಹೊರತುಪಡಿಸಿ ಉಳಿದ ಘಟಕದಲ್ಲಿರುವ ಪೊಲೀಸ್ ಇನ್ಸ್‌ಪೆಕ್ಟರ್ ಮತ್ತು ಮೇಲ್ಪಟ್ಟ ಅಧಿಕಾರಿಗಳಿಗೆ ಅನುಯಾಯಿಗಳನ್ನು ಕಛೇರಿ ಸಹಾಯಕರನ್ನಾಗಿ ನೇಮಕ ಮಾಡಬಹುದಾಗಿರುತ್ತದೆ. ಒಂದು ವೇಳೆ ಪೊಲೀಸ್ ಸಿಬ್ಬಂದಿಗಳ ಬದಲಾಗಿ ಅನುಯಾಯಿಗಳನ್ನು ಪರ್ಯಾಯವಾಗಿ ನೇಮಿಸಿದಲ್ಲಿ ವೆಚ್ಚವೂ ಕಡಿಮೆಯಾಗಲಿದೆ ಎಂದು ಮೇಲೆ ಓದಲಾದ ದಿನಾಂಕ 08.08.2016ರ ಪತ್ರದಲ್ಲಿ ತಿಳಿಸಲಾಗಿರುತ್ತದೆ.

ಈ ಕುರಿತು ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ ಕೇವಲ ನಗರ ಪ್ರದೇಶಗಳಿಗೆ ಮಾತ್ರ ಅನ್ವಯವಾಗುವಂತೆ ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಈ ಕುರಿತು ಜಿಲ್ಲಾ ಮಟ್ಟವನ್ನು ಒಳಗೊಂಡಂತೆ ಪೂರ್ಣ ರಾಜ್ಯಕ್ಕೆ ಅನ್ವಯವಾಗುವಂತೆ ಸಂಖ್ಯಾ ಮತ್ತು ಆರ್ಥಿಕ ಪರಿಣಾಮವುಳ್ಳ ಪರಿಪೂರ್ಣ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಸೂಚಿಸಿದ್ದು, ಡಿ.ಜಿ. ಮತ್ತು ಐ.ಜಿ.ಪಿ.ರವರು ಮೇಲೆ ಓದಲಾದ ದಿನಾಂಕ 18.11.2016ರ ಪತ್ರದಲ್ಲಿ ಸಮಗ್ರ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಪೊಲೀಸ್ ಇಲಾಖೆಯಲ್ಲಿನ ಆರ್ಡರ್ಲಿ ವ್ಯವಸ್ಥೆಯನ್ನು ಪರಿಷ್ಕರಿಸುವ ಕುರಿತ ಪ್ರಸ್ತಾವನೆಯನ್ನು ಪರಿಶೀಲಿಸಿ ಸರ್ಕಾರವು ಈ ಮುಂದಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 289 ಪೊಸಿಇ 2014, ಬೆಂಗಳೂರು ದಿನಾಂಕ 08.03.2017

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ, ಪೊಲೀಸ್ ಇಲಾಖೆಯಲ್ಲಿ ಈಗಿರುವ ಆರ್ಡರ್ಲಿ ವ್ಯವಸ್ಥೆಯನ್ನು ಪರಿಷ್ಕರಿಸಿ, ತಕ್ಷಣದಿಂದ ಜಾರಿಗೆ ಬರುವಂತೆ ಪೊಲೀಸ್ ಸಿಬ್ಬಂದಿಗಳನ್ನು ಆರ್ಡರ್ಲಿಗಳನ್ನಾಗಿ ನೇಮಿಸಲಾಗುತ್ತಿರುವುದನ್ನು ಬದಲಾಯಿಸಿ ಈ ಕೆಳಕಂಡಂತೆ ಅನುಯಾಯಿಗಳನ್ನು ನೇಮಿಸಲು ಹಾಗೂ ಬದಲಿ ಭತ್ಯೆಯನ್ನು ನೀಡಲು ಸರ್ಕಾರದ ಮಂಜೂರಾತಿ ನೀಡಿದೆ.

| Sl. No | Rank | No of Posts | No. of Followers to continue (50% of the existing Nos as per the Police Manual) | Allowance in lieu of followers who are discontinued | Allowance Amount |
|---|---|---|---|---|---|
| 1 | DG & IGP | 1 | 6 x 1 = 6 | | |
| 2 | DG | 5 | 3 x 5 = 15 | 3 x 5 = 15 | As Rs.8000/- per month for 15 members |
| 3 | ADGP | 19 | 3 x 19 = 57 | 3 x 19 = 57 | Rs.6000/- per month for 57 members |
| 4 | IGP | 28 | 2 x 28 = 56 | 2 x 28 = 56 | Rs.5000/- per month for 56 members |
| 5 | DIGP / SP / Commandant etc. | 226 | 1 x 226 = 226 | 2 x 226 = 452 | Rs.3000/- per month for 452 members |
| 6 | ASP | 13 | 1 x 13 = 13 | 1 x 13 = 13 | Rs.2000/- per month for 13 members |
| 7 | Dy.S.P / Dy.Commandant / Assistant Commandant | 572 | - | 2 x 572 = 1144 | Rs.2000/- per month for 1114 members |
| 8 | PI / RPI | 1583 | - | 1 x 1583 = 1583 | Rs.2000/- per month for 1583 members |
| | Total | 2447 | 373 | 3320 | |

ಮೇಲೆ ಮಂಜೂರು ಮಾಡಲಾದ ಅನುಯಾಯಿ ಮತ್ತು ಭತ್ಯೆಗಳು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟಿವೆ:

1) Police Constables who are currently working as orderlies should be replaced with the followers from the existing pool of followers in the department.

2) The intention under lying grant of Home orderly Allowances is to enable the officers to engage a person of their choice as Home

orderly / followers to assist them in the disposal of official work in their residence on part time basis.

3) Home orderly Allowance is to be allowed to officers on calendar month basis for the full month if they are on duty for any part of that month. If an officer is on leave other than CL / Training which is treated as on duty / Study Leave / Compulsory waiting period / Official Tour period etc., for any entire month he will not be eligible for Home orderly Allowance for that month.

4) For claiming allowances, the officers should certify that they have utilized the Home Orderly / Followers Allowances for the purpose it is granted.

5) The Officers should also certify that they have not utilized the service of any Police Constables / Government Orderly / peon at their residence as Home Orderly.

6) This Allowances is attached to the posts for which it is sanctioned and not personal to officers.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: FD 90 Exp 11/17 ದಿನಾಂಕ 03.03.2017ರಲ್ಲಿನ ಸಹಮತಿಯೊಂದಿಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

T. Krishnaiah
(ಟಿ. ಕೃಷ್ಣಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ, (ಪೊಲೀಸ್ ಸೇವೆಗಳು-ಬಿ)

ಇವರಿಗೆ,

1) ಮಹಾಲೇಖಪಾಲರು, (ಎ & ಇ), ಕರ್ನಾಟಕ, ಬೆಂಗಳೂರು.
2) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ನೃಪತುಂಗ ರಸ್ತೆ, ಬೆಂಗಳೂರು
3) ಮಾನ್ಯ ಗೃಹಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು
4) ಆರ್ಡರ್ಲಿ ವ್ಯವಸ್ಥೆಯನ್ನು ಹೊಂದಿರುವ ಎಲ್ಲಾ ಪೊಲೀಸ್ ಅಧಿಕಾರಿಗಳಿಗೆ (ಡಿ.ಜಿ. ಮತ್ತು ಐ.ಜಿ.ಪಿ.ರವರ ಮುಖಾಂತರ)
5) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು
6) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿರವರ ಹಿರಿಯ ಆಪ್ತ ಕಾರ್ಯದರ್ಶಿ, ಒಳಾಡಳಿತ ಇಲಾಖೆ
7) ಸರ್ಕಾರದ ಉಪ ಕಾರ್ಯದರ್ಶಿ (ಪೊಲೀಸ್ ಸೇವೆಗಳು), ಒಳಾಡಳಿತ ಇಲಾಖೆ ಇವರ ಆಪ್ತ ಸಹಾಯಕರಿಗೆ
8) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು